**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**
**ಸಿ.ಸಿ. 1180–2015**

| | | |
|---|---|---|
| ಹೆಸರು | ಶಫೀ ಅಹಮ್ಮದ್ | ಪ್ರಾ.ಸಾ.1 |
| ತಂದೆ ಹೆಸರು | ಅಮೀರ್ ಜಾನ್ | ಚಾ.ಸಾ.1 |
| ವಯಸ್ಸು | 41ವರ್ಷ | |
| ಕೆಲಸ | ವ್ಯಾಪಾರ | ಸಾ.ಪ್ರ.ವ.ಬೋ |
| ಹಾಲಿ ವಾಸ | ದುನ್ನಸಂದ್ರ | ದಿ:–3–04–2019 |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ರವರಿಂದಃ–**

ಚಾ.ಸಾ.2 ರಿಂದ 7 ನನಗೆ ಗೊತ್ತು. ಈಗ ಸುಮಾರು 4 ವರ್ಷಗಳ ಹಿಂದೆ ಸಂಜೆ 5.30 ಗಂಟೆ ಸಮಯದಲ್ಲಿ ನಾನು ಚಿಕನ್ ಅಂಗಡಿಯಲ್ಲಿದ್ದಾಗ ನಾಗರೆಡ್ಡಿ ರವರ ತಮ್ಮ ಮುನಿರೆಡ್ಡಿ ಅಂಗಡಿ ಹತ್ತಿರ ಬಂದು ಗಲಾಟೆ ಮಾಡಿರುತ್ತಾನೆ. ನನಗೆ ಆರೋಪಿತರು ಹೊಡೆದಿರುತ್ತಾರೆ. ಸದರಿ ಅಂಗಡಿ 1ನೇ ಆರೋಪಿಗೆ ಸೇರಿದ ಕುರಿತು ನನ್ನ ಜೊತೆ ಗಲಾಟೆ ಮಾಡಿರುತ್ತಾರೆ. ನನಗೆ ಅಂಗಡಿ ನಡೆಸ ಬಾರದು ಎಂದು ಹೇಳಿರುತ್ತಾರೆ. ಹಾಗೂ ಅಂಗಡಿಯಲ್ಲಿನ ತಕ್ಕಡಿಯನ್ನು ಹೊಡೆದು ಹಾಕಿರುತ್ತಾರೆ. ಆ ಕುರಿತು ನಾನು ದೂರು ನೀಡಿರುತ್ತೇನೆ. ಸಾಕ್ಷಿ ದೂರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೊಲೀಸರು ಅಂಗಡಿ ಹತ್ತಿರ ಬಂದು ಕೇಳಿರುತ್ತಾರೆ. ಸಾಕ್ಷಿಯು ಮಹಜರಿನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಬೋರ್ಡ್ ಮತ್ತು ಸ್ಕೇಲ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ. 1ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2ನೇ ಆರೋಪಿಯನ್ನು ಗುರುತಿಸುವುದಾಗಿ ತಿಳಿಸಿರುತ್ತಾರೆ. 2ನೇ ಆರೋಪಿಗೆ ವಿನಾಯತಿಯ ಅರ್ಜಿಯನ್ನು ಹಾಕಿದ್ದು, ಗುರುತಿಸಲು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶ: ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಕೋರಿರುತ್ತಾರೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಮಾನ್ಯ ಎಪಿಪಿ ರವರಿಂದಃ–**

ನಾನು ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದು, ಜೀವ ಬೆದರಿಕೆ ಹಾಕಿದ ಕುರಿತು ದೂರು ನೀಡಿದ್ದೇನೆ ಎಂದರೆ ಸರಿ. ನಮ್ಮ ದೇವರ ಪೋಟೋವನ್ನು ಕಾಲಿನಿಂದ ತುಳಿದು ಆರೋಪಿತರು ಅಪಮಾನ ಮಾಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ –**

ಚಾ.ಸಾ.2 ರಿಂದ 4 ನಮ್ಮ ಊರಿನವರು ಎಂದರೆ ಸರಿ. ಗಲಾಟೆ ಆದ ದಿನಾಂಕ ನನಗೆ ನೆನಪಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಿಪಿ.1ರಲ್ಲಿ ಬರೆದ ವಿಚಾರಗಳು ಗೊತ್ತಿರದೇ ಪೊಲೀಸರ ಕೋರಿಕೆ ಮೇರೆಗೆ ನಿಪಿ.1ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಆರೋಪಿತರು ನಮ್ಮ ಊರಿನವರಾಗಿದ್ದು, ಅವರಿಗೂ ನನಗೂ ಆಗದೇ ಇದ್ದುದರಿಂದ ಅವರ ಮೇಲೆ ಯಾವುದೇ ಘಟನೆ ಆಗದೇ ಇದ್ದರೂ ಒಂದು ಸುಳ್ಳು ದೂರನ್ನು ನೀಡಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ.2ರಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿಲ್ಲ.  ಪೊಲೀಸರ ಕೋರಿಕೆ ಮೇರೆಗೆ ನಿಪಿ.2ಕ್ಕೆ ಸಹಿ ಹಾಕಿದ್ದೇನೆ ಎಂದರೆ ಸರಿ.  ನಾನು ಹೇಳಿದಂತೆ ಯಾವುದೇ ಫೋಟೋವನ್ನು ಕಿತ್ತುಹಾಕದೇ ಇದ್ದರೂ ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**